ಪ್ರಜಾವಾಣಿ

# 'ಭಾರತ ತಂಡಕ್ಕೆ ಆಡುತ್ತೇನೆ'

ಬೆಂಗಳೂರು: 'ನನಗೆ ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಸಿಗಲಿದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮತ್ತೆ ಆಡುತ್ತೇನೆ' ಎಂದು ಕರ್ನಾಟಕ ಕ್ರಿಕೆಟ್ ತಂಡದ ಬ್ಯಾಟ್ಸ್‌ಮನ್ ರಾಬಿನ್ ಉತ್ತಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಅವರು 'ಮೈ ಕಂಟ್ರಿ ರನ್ 2016' ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ದೇಶಿ ಕ್ರಿಕೆಟ್‌ನಲ್ಲಿ ನನ್ನ ಪ್ರದರ್ಶನ ತೃಪ್ತಿಕರವಾಗಿದೆ. ಯಾವುದೇ ಕ್ರಮಾಂಕದಲ್ಲಿಯೂ ಬ್ಯಾಟಿಂಗ್ ಮಾಡಲು ನಾನು ಸಮರ್ಥನಾಗಿದ್ದೇನೆ. ತಂಡದ ಬೇಡಿಕೆಗೆ ಅನುಗುಣವಾಗಿ ಯಾವುದೇ ಕ್ರಮಾಂಕದಲ್ಲಿಯೂ ಉತ್ತಮವಾಗಿ ಆಡುತ್ತೇನೆ. ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳುವುದೇ ನನ್ನ ಪ್ರಮುಖ ಗುರಿ' ಎಂದು ರಾಬಿನ್ ಹೇಳಿದರು.

ಪ್ರಸಕ್ತ ಋತುವಿನ ರಣಜಿ ಟೂರ್ನಿಯಲ್ಲಿ ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ್ದರು. ಆದರೂ ಅವರು ಆಯ್ಕೆ ಸಮಿತಿಯ ಗಮನ ಸೆಳೆಯಲಿಲ್ಲ.



ಗೆಳತಿ ಶೀತಲ್ ಗೌತಮ್ ಜತೆಗೆ ರಾಬಿನ್ ಉತ್ತಪ್ಪ ಪಿಟಿಐ ಚಿತ್ರ